# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :758

ಸದಸ್ಯರ ಹೆಸರು :ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ :22.02.2023

ಉತ್ತರಿಸುವ ಸಚಿವರು :ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ಹೋಳೂರು ಹೋಬಳಿ, ಜಯಸಂದ್ರ ಗ್ರಾಮದ ಸರ್ವೆ ನಂ. 5,6,7,8 ಮತ್ತು 9 ಈ ಜಮೀನುಗಳನ್ನು ಭೂ ಪರಿವರ್ತನೆ ಮಾಡಿ, ನಿವೇಶನಗಳನ್ನು ಹಂಚಿಕೆ/ಮಾರಾಟ ಮಾಡಲಾಗಿದೆಯೇ; | ಕೋಲಾರ ತಾಲ್ಲೂಕು, ಹೋಳೂರು ಹೋಬಳಿ, ಜಯಸಂದ್ರ ಗ್ರಾಮದ - ಸ.ನಂ. 5,6,7,8 ಜಮೀನುಗಳನ್ನು ಭೂ ಪರಿವರ್ತನೆ ಮಾಡಿ ನಿವೇಶನಗಳು ಹಂಚಿಕೆಯಾಗಿದ್ದು ಮಾರಾಟ ಮಾಡಲಾಗಿದೆ. ಸ.ನಂ. 9 ರಲ್ಲಿ ಭೂ ಪರಿವರ್ತನೆಯಾಗಿರುವ ಬಗ್ಗೆ ಆರ್.ಟಿ.ಸಿ. ರೀತ್ಯಾ ಮಾಹಿತಿ ಕಂಡುಬಂದಿರುವುದಿಲ್ಲ. |
| ಆ) | ಹಾಗಿದ್ದಲ್ಲಿ ಅದರ ಸಂಪೂರ್ಣ ವಿವರಗಳನ್ನು ಒದಗಿಸುವುದು; | ಕೋಲಾರ ತಾಲ್ಲೂಕು, ಹೋಳೂರು ಹೋಬಳಿ, ಜಯಸಂದ್ರ ಗ್ರಾಮದ ಸ.ನಂ. 5,6,7,8 ಜಮೀನುಗಳನ್ನು ಭೂ ಪರಿವರ್ತನೆಯಾಗಿದ್ದು ಈ ಪೈಕಿ ಖಾತೆ ಸಂಖ್ಯೆ: 178 ರಿಂದ 877 ರವರೆಗೂ ಡಿಮ್ಯಾಂಡ್ ರಿಜಿಸ್ಟರ್ 9 ಮತ್ತು 10 ರಲ್ಲಿ ಪ್ರತ್ಯೇಕವಾಗಿ ತೆರೆದು ಖಾತೆ ಅಂಗೀಕರಿಸಿರುತ್ತಾರೆ. |
| ಇ) | ಸದರಿ ನಿವೇಶಗಳನ್ನು ನಿಯಮಾನುಸಾರ ಮಾರಾಟ ಮಾಡಲಾಗಿದ್ದರೂ, ಸ್ಥಳೀಯ ಭೂಗಳ್ಳರು ಅಕ್ರಮವಾಗಿ ಕೆಲವು ನಿವೇಶನಗಳನ್ನು ಅತಿಕ್ರಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |

| | | |
|---|---|---|
| ಈ) | ಈ ಸಂಬಂಧ ದೂರುಗಳೇನಾದರೂ ಬಂದಿದೆಯೇ; ಬಂದಿದ್ದಲ್ಲಿ, ಅದರ ವಿವರಗಳನ್ನು ಒದಗಿಸುವುದು; | ಸದರಿ ವಿಚಾರದಲ್ಲಿ ಶ್ರೀಮತಿ ನೇತ್ರಾವತಿ ಕೋಂ ಕೆ.ಆರ್. ಶ್ರೀನಾಥ್ ಕಠಾರಿಪಾಳ್ಯ ಕೋಲಾರ ರವರು ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರನ್ನು ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಕಾರ್ಯನಿರ್ವಾಹಣಾಧಿಕಾರಿ ತಾಲ್ಲೂಕು ಪಂಚಾಯ್ತಿ ಕೋಲಾರ ರವರಿಗೆ ಕಳುಹಿಸಲಾಗಿರುತ್ತದೆ. |
| ಉ | ಇದರಿಂದಾಗಿ ನಿವೇಶನದಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಊ | ಯಾವ ಕಾಲಮಿತಿಯಲ್ಲಿ ಸದರಿ ಅಕ್ರಮ ಅತಿಕ್ರಮಣವನ್ನು ತೆರವುಗೊಳಿಸಲಾಗುವುದು, ಅತಿಕ್ರಮಣದಾರರ ವಿರುದ್ಧ ಇದುವರೆವಿಗೆ ತೆಗೆದುಕೊಂಡ ಕ್ರಮಗಳೇನು.? | ಸದರಿ ಅತಿಕ್ರಮಣವನ್ನು ತೆರವುಗೊಳಿಸುವ ವಿಚಾರವು ಸಿವಿಲ್ ಸ್ವರೂಪದ್ದಾಗಿದ್ದು ಬಾಧಿತರು ಸೂಕ್ತ ಪ್ರಾಧಿಕಾರದಲ್ಲಿ ಪ್ರಶ್ನಿಸಿ ಪ್ರತಿಪಾದಿಸಿ ಪರಿಹಾರ ಕಂಡುಕೊಳ್ಳಲು ಅವಕಾಶವಿರುತ್ತದೆ. |

ಸಂಖ್ಯೆ: ಆರ್‌ಡಿ 90 ಎಲ್‌ಜಿಕ್ಯೂ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು